Rotary


# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship


Volume 40 Issue - 20 20th November 2025

## Impression on

## RHYTHM

### Zonal Cultural Competition 2025-26

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ರೋಟರಿ ಬಂಧುಗಳೇ

ಪಂಚಗಂಗಾವಳಿಯಲ್ಲಿ ಮಿಂದೆದ್ದು ಚಂದನ ಶ್ರೀಗಂಧದಿಂದ ಲೇಪನಗಳಿಂದ ಕಂಗೊಳಿಸುತ್ತಾ ಶ್ರೀನಿವಾಸ, ಪಂಚಮಿಯ ಕಂಚಿನ ಕಂಠದ ಸ್ವರದಲ್ಲಿ ಮೂಡಿಬಂದ ಗಣಪತಿ ಸ್ತುತಿಯೊಂದಿಗೆ ಬಾಲಗೋಪಾಲರ ನೃತ್ಯದೊಂದಿಗೆ ಶ್ರೀಕೃಷ್ಣ ಸ್ವತಃ ಧರೆಗಿಳಿದು ತನ್ನ ಒಡ್ಡೋಲಗದೊಂಡಿಗೆ ಪ್ರಥಮ ಹೆಜ್ಜೆ ಅಂದರೆ **Rhythm** ಅನ್ನು ವೇದಿಕೆಯಲ್ಲಿ ಕುಣಿದು ತೆರೆ ಸರಿಸಿ ಹರಸಿದ ಯಶಸ್ವೀ ದೃಶ್ಯ ಕಾವ್ಯ ವಲಯ 1 ರ ಸಾಂಸ್ಕೃತಿಕ ಸ್ಪರ್ಧಾವಳಿ ಸಾಂಗೊಪಾಂಗವಾಗಿ ರಾತ್ರಿ 10 ಗಂಟೆಯವರೆಗೆ ಸಾಗಿ ರೋಟರಿ ಕುಂದಾಪುರ ದಕ್ಷಿಣದ ಹಿರಿ ಕಿರಿಯರ ಸಾಮ್ಯದ ಪ್ರಾಮಾಣಿಕ ಪರಿಶ್ರಮದಿಂದ ಶ್ರೀನಾಥ – ಸಚಿನ್ ಅಂದರೆ ಕೃಷ್ಣಾರ್ಜುನರ ಮುಂದಾಳತ್ವದಲ್ಲಿ ರೋಟರಿ ತನ್ನ ದಿಗ್ವಿಜಯವನ್ನು ಸಾರಿತ್ತು.

ನಿನ್ನೆ ಅಂದ್ರೆ ತಾರೀಕು 16 ಭಾನುವಾರ 2025 ರಂದು ಆದಿತ್ಯ ಸೀ ಶೋರ್ ರಿಸಾರ್ಟ್‌ನ ಅಂಗಣದಲ್ಲಿ ನಡೆದ RHYTHM ವಲಯ 1 ರ ಸಾಂಸ್ಕೃತಿಕ ಸ್ಪರ್ಧಾವಳಿ ಅತ್ಯಂತ ಯಶಸ್ವಿ ಕಾರ್ಯಕ್ರಮ ಆಗಿ ಮೂಡಿಬರಲು ಕಾರಣರಾದ ಸರ್ವ ರೋಟರಿ ಸದಸ್ಯರುಗಳು ಹಾಗೂ ಅವರ ಕುಟುಂಬಕ್ಕೆ ಅಧ್ಯಕ್ಷರು, ಸಂಚಾಲಕರು, ಜಾಸ್ಮಿನ್ ಬಳಗ ಹಾಗೂ ಸಮಸ್ತ ಸಂಘಟಕರ ಪರವಾಗಿ ಹೃದಯಾಂತರಾಳದಿಂದ ಮೊದಲು ಅಭಿನಂದನೆ ಹಾಗೂ ಕೃತಜ್ಞತೆ ಸಲ್ಲಿಸುತ್ತಿದ್ದೇವೆ.

ಮೂರು ದಿನ ಕಳೆದರೂ ಇಂದಿಗೂ ಮನದಲ್ಲಿ ಸ್ವಪ್ನದ ಹೊಳೆಯಂತೆ ನಿತ್ಯವು ಆ ಸುಂದರ ಸಾಂಸ್ಕೃತಿಕ ಹಬ್ಬದ ಮೆರುಗು ಮೆಲುಕು ಹಾಕುತ್ತಲೇ ಇದೆ. ಸಮಸ್ತ ರೋಟರಿ ಕ್ಲಬ್ಬುಗಳ ಬಲವಾದ ಸ್ಪರ್ಧೆಗಳು ನಿರ್ಣಾಯಕರಿಗೆ ಮಾರ್ಕ್ ನೀಡಲು ಬಹಳ ಕಷ್ಟವಾಗುವಷ್ಟು ತಮ್ಮ ಪರ್ಫಾರ್ಮೆನ್ಸ್‌ಗಳನ್ನು ನೀಡಿರುವುದು ಪ್ರಶಂಸನೀಯ! ಬೆಳಗಿನ ತಿಂಡಿಯ ಸವಿ, ಮಸಾಲೆ ದೋಸೆಯ ರುಚಿ, ಪಾನಿಪೂರಿ ಮಸಾಲೆ ಪೂರಿಗಾಗಿ ಹಿರಿ ಕಿರಿಯರೆನ್ನದೆ ಸಾಲಲ್ಲಿ ನಿಂತು ಸವಿದ ಖುಷಿ ಸಿಗುವುದು ಇನ್ನೆಂದೋ? ಯಕ್ಷಗಾನದ ಕಂಪಿನಿಂದ ಪ್ರಾರಂಭವಾದ ಕಾರ್ಯಕ್ರಮ ಕುಂದಾಪುರದವರ ಮಹಾಭಾರತದ ಪ್ರಹಸನದಲ್ಲೂ ಯಕ್ಷಗಾನದ ಸಂಭಾಷಣೆಗಳ ಮಹಾಪೂರ. ನೃತ್ಯಗಳ ಸ್ಪರ್ಧೆಯಲ್ಲೂ ವೈವಿಧ್ಯಮಯ ರೂಪಕ! ಪ್ರಹಸನಗಳಲ್ಲಂತೂ ಏಕಲವ್ಯ, ದ್ರೌಪದಿ ವಸ್ತ್ರಾಪಹರಣ, ಸಾಲುಮರದ ತಿಮ್ಮಕ್ಕ ಹಾಗೂ ರೈತರ ಕಷ್ಟಭವಣೆಗಳ ರೂಪಕ ಹೃದಯವನ್ನೇ ತಟ್ಟಿತು. ಒಟ್ಟಿನಲ್ಲಿ ಪಂಚಗಂಗಾವಳಿಯ ಹರಿವಿನ ತಟದಲ್ಲಿ ಸೆಲ್ಫಿ ಪಾಯಿಂಟ್ ಎಲ್ಲರ ಕೇಂದ್ರ ಬಿಂದು ಆಗಿತ್ತು. ಎಂದೂ ಮರೆಯದ ಸುಂದರ ನೆನಪು 'Rhythm' ಇಂದು ಮುಂದೂ ಅಜರಾಮರ. – **ರೊ. ರಮಾನಂದ ಕಾರಂತ್**

---

## ವಾರದ ಸಭೆಯ ವರದಿ



ತಾ॥13/11/2025 ಗುರುವಾರ ನಮ್ಮ ವಾರದ ಸಭೆಗೆ ನಮ್ಮ ರೋಟರಿ ಕ್ಲಬ್ ರಿವರ್ ಸೈಡ್‌ನ ಮಾಜಿ ಅಧ್ಯಕ್ಷ ರೊ. ರಾಮಕೃಷ್ಣ ಐತಾಳರ ಪುತ್ರಿ ಸೃಷ್ಟಿ ಐತಾಳ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ "ಪ್ರಕೃತಿ ಚಿಕಿತ್ಸೆ ಹಾಗೂ ಯೋಗ" ಇದರ ಮಹತ್ವ ಜೊತೆಗೆ ನಮ್ಮ ಆರೋಗ್ಯವನ್ನು ಔಷಧಿ ಉಪಯೋಗಿಸದೇ ಕಾಪಾಡಿಕೊಳ್ಳುವುದು ಹೇಗೆ ಎಂದು ವಿವರಿಸಿದರು. ಶ್ರೀಯುತರು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವಿಭಾಗದಲ್ಲಿ ವೈದ್ಯಕೀಯ ಪದವಿಯನ್ನು ಓದುತ್ತಿದ್ದು ನಾವು ಸೇವಿಸುವ ಆಹಾರ, ಯೋಗ ಮತ್ತು ಪ್ರಾಣಾಯಾಮ ಮತ್ತು ಪ್ರಕೃತಿ ಚಿಕಿತ್ಸೆಗಳಾದ MUD therapy, HydrOtherapy, Water Therapy, Accupuncture and Accu pressure ಉಪವಾಸ ಮುಂತಾದ ಮಹತ್ವದ ವಿಚಾರಗಳನ್ನು ತಿಳಿಸಿದರು. ಆಗಮಿಸಿದ ಸರ್ವರನ್ನೂ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತ ವಾರದ ವರದಿ ವಾಚಿಸಿದರು. ರೊ. ಸುರೇಖಾ ಪುರಾಣಿಕ್ ಆಗಮಿಸಿದ ಅತಿಥಿಗಳ ಪರಿಚಯ ಮಾಡಿದರು. ರೊ. ಸೀತಾರಾಮ್ ನಕ್ಕತ್ತಾಯ ವಾರದ ಚಿಂತನೆ ಮಂಡಿಸಿದರು. ರೊ. ಜುಡಿತ್ ಮೆಂಡೋನ್ಸಾ ರೋಟರಿ ಮಾಹಿತಿ ತಿಳಿಸಿದರು. ರೊ. ಕೆ. ಕೆ. ಕಾಂಚನ್ Dist. T.R.F. Seminaarನ ಅನುಭವ ಹಂಚಿಕೊಂಡರು. ರೊ. ಶ್ರೀನಾಥ್ ರಾವ್ ವಲಯ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಯ ರೂಪ ರೇಖೆಗಳನ್ನು ಸದಸ್ಯರಿಗೆ ತಿಳಿಸಿದರು. ಲಾಸ್ಟ್ ಲಾಫ್ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ನಡೆಸಿಕೊಟ್ಟರು. ರೊ. ಜಾನ್ಸನ್ ಆಲ್ಮೆಡಾ ವಂದನಾರ್ಪಣೆಗೈದರು.

---

## RHYTHM – ವಲಯ 1 ರ ಸಾಂಸ್ಕೃತಿಕ ಸ್ಪರ್ಧಾವಳಿ

ತಾ. 16. 11. 2025 ಭಾನುವಾರ ಬೆಳಗ್ಗೆ 9:30ಕ್ಕೆ Rhythm ರೋಟರಿ ವಲಯ ಒಂದರ ಸಾಂಸ್ಕೃತಿಕ ಸ್ಪರ್ಧಾವಳಿ ಕಾರ್ಯಕ್ರಮವನ್ನು ರೊ. ಪಿಡಿಜಿ ಎ. ಎಸ್. ಎನ್. ಹೆಬ್ಬಾರ್ ಇವರು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಉದ್ಘಾಟನೆಗೂ ಮೊದಲು ಯಕ್ಷಗಾನದ ಬಾಲಗೋಪಾಲ ಕೃಷ್ಣ ಒಡ್ಡೋಲಗದ ಮುಖೇನ ಆಗಮಿಸಿದ ಸರ್ವರನ್ನು ಸ್ವಾಗತಿಸಲಾಯಿತು. ಕಾರ್ಯಕ್ರಮದ ಸಮಾರೋಪದ ಮುಖ್ಯ ಅತಿಥಿಗಳಾಗಿ ರೊ. ವಿನಯ್, Dist. Cultural chairman ಆಗಮಿಸಿ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ ಅಸಿಸ್ಟೆಂಟ್ ಗವರ್ನರ್ ರೊ. ಐ. ನಾರಾಯಣ, District Learning Chairman Rtn. ಜಯಪ್ರಕಾಶ್ ಶೆಟ್ಟಿ ಹಾಗೂ ಸರ್ವ ವಲಯ ಸೇನಾನಿಗಳು ಉಪಸ್ಥಿತರಿದ್ದರು. ರೋಟರಿ ಕ್ಲಬ್ ಬೈಂದೂರು ರೋಟರಿ ವಲಯಮಟ್ಟದ ಸಾಂಸ್ಕೃತಿಕ ಸ್ಪರ್ಧಾವಳಿಯಲ್ಲಿ ಅತ್ಯಧಿಕ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡು ಚಾಂಪಿಯನ್ ಆಗಿರುತ್ತಾರೆ




Welcome Dance by ಬಾಲಗೋಪಾಲ – ಕಾರ್ಯಕ್ರಮದ ಕೋಲ್ಮಿಂಚು


































ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪಡೆದ ನಮ್ಮ ಕ್ಲಬ್ಬಿನ ಮಾಜಿ ಅಧ್ಯಕ್ಷರಾದ ರೊ. ಜಯಕರ ಶೆಟ್ಟಿ ಅವರಿಗೆ ಸಮಾರೋಪ ಸಮಾರಂಭದಲ್ಲಿ ಸನ್ಮಾನಿಸಲಾಯಿತು.



ರೋಟರಿ ಕ್ಲಬ್ ಬೈಂದೂರು ರೋಟರಿ ವಲಯಮಟ್ಟದ ಸಾಂಸ್ಕೃತಿಕ ಸ್ಪರ್ಧಾವಳಿಯಲ್ಲಿ ಅತ್ಯಧಿಕ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡು ಚಾಂಪಿಯನ್ ಆಗಿರುತ್ತಾರೆ



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95

# ರೋಟರಿ ಮಾಹಿತಿ

## ಸದಸ್ಯರ ಹಾಜರಾತಿ ಬಗ್ಗೆ..

ಒಂದು ರೋಟರಿ ಕ್ಲಬ್ ಬಲಶಾಲಿಯಾಗಿ ಹಾಗೂ ಕ್ರಿಯಾಶೀಲವಾಗಿ ಬೆಳೆಯಬೇಕಾದರೆ ಸಾಪ್ತಾಹಿಕ ಸಭೆಗಳಲ್ಲಿ ಸದಸ್ಯರ ಹಾಜರಾತಿ ಅತೀ ಮುಖ್ಯ. 1922ರಲ್ಲಿ ನಡೆದ R. I. ನ ಸಭೆಯಲ್ಲಿ ಹಾಜರಿಗೆ ಮಹತ್ವ ನೀಡುವ ಪ್ರವೃತ್ತಿ ಪ್ರಾರಂಭಗೊಂಡಿತು. ಅಲ್ಲಿ ಹಾಜರಾತಿಯನ್ನು ಉತ್ತಮ ಪಡಿಸಲು ರೋಟರಿ ಕ್ಲಬ್‌ಗಳ ಮಧ್ಯೆ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಇದರಿಂದ ಜಾಗತಿಕವಾಗಿ ಉತ್ತಮ ಹಾಜರಾತಿಯನ್ನು ಕಾಯ್ದುಕೊಳ್ಳುವ ಮನೋಭಾವ ಸದಸ್ಯರಲ್ಲಿ ಬೆಳೆಯಿತು. ಪ್ರತೀ ಸಭೆಯಲ್ಲೂ ಪ್ರತಿಶತ ಹಾಜರಾತಿಯನ್ನು ಕಾಯ್ದುಕೊಳ್ಳುವುದು ಇಲ್ಲವೇ ಬೇರೆ ಕ್ಲಬ್‌ಗಳ ಸಾಪ್ತಾಹಿಕ ಸಭೆಗಳಿಗೆ ಹಾಜರಾಗಿ ತಮ್ಮ ಸಭೆಯ ಕೊರತೆಯನ್ನು ತುಂಬಿಸಿಕೊಳ್ಳುವ ಪ್ರವೃತ್ತಿ ಸದಸ್ಯರಲ್ಲಿ ಶುರುವಾಯಿತು.

R. I. ನಿಯಮಗಳ ಪ್ರಕಾರ ಪ್ರತೀ ಸದಸ್ಯರು 60 ಶೇಕಡಾ ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಲೇಬೇಕು. ಆದರೂ ಪ್ರತೀ ಕ್ಲಬ್‌ಗಳು ಸದಸ್ಯರಿಂದ ಅಧಿಕ ಹಾಜರಾತಿಯನ್ನು ನಿರೀಕ್ಷಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತವೆ. ಯಾಕೆಂದರೆ ಸದಸ್ಯರ ಗೈರು ಹಾಜರಾತಿಯಿಂದಾಗಿ ಕ್ಲಬ್ಬಿನ ಸದಸ್ಯರ ವೈವಿಧ್ಯತೆಯಲ್ಲಿ ಕೊರತೆಯುಂಟಾಗಬಹುದು. ಕ್ಲಬ್ಬಿನ ಜಾರಿಯಲ್ಲಿರುವ ಯೋಜನೆಗಳಲ್ಲಿ ಸದಸ್ಯರು ಪಾಲುಗೊಳ್ಳುವ ಅವಕಾಶ ತಪ್ಪಿ ಹೋಗಬಹುದು. ಹಾಗೂ ಸದಸ್ಯರ ನಡುವಿನ ವೈಯಕ್ತಿಕ ಸಂಬಂಧಗಳ ಬೆಳವಣಿಗೆಗಳಿಗೆ ಅಡ್ಡಿಯುಂಟಾಗಬಹುದು. ಹಾಗಾಗಿ ಬೇರೆ ಬೇರೆ ಕಾರಣಗಳಿಂದಾಗಿ ಹಾಜರಾತಿಗೆ ಹೆಚ್ಚಿನ ಮನ್ನಣೆ ನೀಡಲು ಇಲ್ಲವೇ ಹಾಜರಾತಿಯ ಮಿತಿಯನ್ನು ಹೆಚ್ಚಿಸಲು ಪ್ರಸ್ತಾವಗಳು ಮಂಡಿತವಾಗುತ್ತಿದೆಯಾದರೂ ಅವುಗಳಿಗೆ R. I. ಯ ಶಾಸನ ರಚನಾ ಸಮಿತಿ ಒಪ್ಪಿಗೆ ನೀಡಿಲ್ಲ. ಈಗೀಗ ರೋಟರಿಯ ಸದಸ್ಯರು ಜಾಲ ಸಂಪರ್ಕದ ಮೂಲಕ ರೋಟರಿಯ ಇ–ಕ್ಲಬ್‌ಗಳ ಸಭೆಗಳಿಗೆ ಹಾಜರಾಗುವ ಅವಕಾಶವನ್ನು ರೋಟರಿ ಕಲ್ಪಿಸಿಕೊಟ್ಟಿದೆ. ಜಾಲ ತಾಣಗಳ ಮುಖಾಂತರ ಸಂಪರ್ಕವನ್ನು ರೂಪಿಸಿಕೊಂಡು ಸಭೆಗೆ ಹಾಜರಾಗಬಹುದು. ವಿವಿಧ ವಿಷಯಗಳ ಬಗೆಗೆ ಜಾಲತಾಣದಲ್ಲಿರುವ ಮಾಹಿತಿಯನ್ನು ಪಡೆಯಬಹುದು. ತಮ್ಮ ಅನಿಸಿಕೆಗಳನ್ನು ಮತ್ತು ಟಿಪ್ಪಣಿಗಳನ್ನು ಕ್ಲಬ್‌ನ ಕಾರ್ಯದರ್ಶಿಯವರಿಗೆ ಜಾಲತಾಣಗಳ ಮುಖಾಂತರ ಯಾವಾಗ ಬೇಕಾದರೂ ನೀಡಬಹುದು.

## ಹುಟ್ಟುಹಬ್ಬದ ಶುಭಾಶಯಗಳು



**ಪಿಪಿ ರೊ. ವಾಸುದೇವ ಕಾರಂತ್**
ದಿನಾಂಕ : ನವೆಂಬರ್ 26
ಮೊಬೈಲ್ : 8277612815



**ಪಿಪಿ ರೊ. ಕೆ. ಕೃಷ್ಣ ಕಾಂಚನ್**
ದಿನಾಂಕ : ನವೆಂಬರ್ 26
ಮೊಬೈಲ್ : 9448328632

**THE ROTARY 4-WAY TEST**

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?


*This Bulletin is sponsored by :*
**Rtn. Nagesh Puthran**
**Mob. : 9740980021**
For Private Circulation only



Email id – rotaryclub.kundapurasouth@gmail.com




Rtn. K. T. Surendranath 1995-96



Rtn. B. C. Somayaji 1997-98




Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04



Rtn. A. Shantharam Pai 2005-06



Rtn. S. Sadananda Chatra 1996-97



Rtn. K. Suresh Kamath 1998-99



Rtn. S. Vijaya Shetty 2000-01



Rtn. U. S. Shenoy 2002-03




Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouziine F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25